ಆರ್.ಐ.ಡಿ.ಎಫ್–14ರ ಯೋಜನೆಯಡಿ ಸರ್ಕಾರದಲ್ಲಿ ಸ್ವೀಕೃತವಾಗಿದೆ. ಈ ಸೇತುವೆಯು ಗ್ರಾಮೀಣ ರಸ್ತೆಯ ಮೇಲೆ ಬರುತ್ತದೆ. ಈ ಕಾಮಗಾರಿಯು ಆರ್.ಐ.ಡಿ.ಎಫ್–14ರ ಕ್ರಿಯಾ ಯೋಜನೆಯಲ್ಲಿ ಸೇರಿರುವುದಿಲ್ಲವಾದ್ದರಿಂದ ಪ್ರಸ್ತುತ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿಲ್ಲ.

215 ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)
ಮಾನ್ಯ ಲೋಕೋಪಯೋಗಿ ಸಚಿವರು

ಅ) ಕಾಪು ವಿಧಾನಸಭಾ ಕ್ಷೇತ್ರದ ಕುಕ್ಕೆಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಳ್ಳಂಪಲ್ಲಿ–ಪರೀಕ ಮಧ್ಯೆಯ ಸುವರ್ಣ ನದಿಗೆ ಸೇತುವೆಯನ್ನು ನಿರ್ಮಿಸಲು ಕೆ.ಆರ್.ಡಿ.ಸಿ.ಎಲ್ ಮುಖಾಂತರ 320 ಲಕ್ಷ ರೂಪಾಯಿಗಳಿಗೆ ಪ್ರಸ್ತಾವನೆ ಅನುಮೋದಿಸಲ್ಪಟ್ಟಿದೆಯೇ;

ಕಾಪು ವಿಧಾನಸಭಾ ಕ್ಷೇತ್ರದ ಕುಕ್ಕೆಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಳ್ಳಂಪಲ್ಲಿ–ಪರೀಕ ಮಧ್ಯೆ ಸುವರ್ಣ ನದಿಗೆ ಸೇತುವೆಯ ನಿರ್ಮಾಣವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ರೂ.4.08 ಕೋಟಿಗಳ ಮೊತ್ತದಲ್ಲಿ ತೆಗೆದುಕೊಳ್ಳಲು ಯೋಜಿಸಿದೆ.

ಆ) ಅನುಮೋದಿಸಲ್ಪಟ್ಟಿದ್ದಲ್ಲಿ ಈ ಕಾಮಗಾರಿ ಆರಂಭವಾಗಿದೆಯೇ?

ಈ ಸೇತುವೆಯ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಲಾಗಿದ್ದು, ಸಮಾಲೋಚಕರು ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಿದ್ದು, ವರದಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ತಾಂತ್ರಿಕ ಸಮಿತಿ ಮತ್ತು ಮಂಡಳಿ ಅನುಮೋದನೆಯಾದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

219 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

ಅ ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣಕ್ಕೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸುಧಾರಿತ ನೀರು ಸರಬರಾಜು ಯೋಜನೆಯಡಿಯಲ್ಲಿ (ಆರ್.ಸಿ.ಸಿ. ವೆಂಟೆಡ್ ಬ್ಯಾರೇಜ್) ಕಾಮಗಾರಿಗೆ ಯಾವಾಗ ಅನುಮೋದನೆ ನೀಡಲಾಯಿತು; ಇದರ ಯೋಜನಾ ವೆಚ್ಚ ಎಷ್ಟು; ಇದಕ್ಕೆ ಎಷ್ಟು ಕಾಲಮಿತಿಯನ್ನು ನಿಗಧಿಪಡಿಸಲಾಗಿತ್ತು?

ಬೀದರ ಜಿಲ್ಲೆಯ ಭಾಲ್ಕಿ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಮಾಡುವ ಯೋಜನೆಯನ್ನು ಅಂದಾಜು ರೂ.603.02 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಯೋಜನೆಯಡಿಯಲ್ಲಿ ಕಲವಾಡಿ ಗ್ರಾಮದ ಹತ್ತಿರ ಕಾರಂಜಾ ನದಿಗೆ ಅಡ್ಡಲಾಗಿ ಆರ್.ಸಿ.ಸಿ.ವೆಂಟೆಡ್ ಬ್ಯಾರೇಜ್ ನಿರ್ಮಿಸುವ ಅಂದಾಜು ವೆಚ್ಚ ರೂ.124.50 ಲಕ್ಷಗಳ ಕಾಮಗಾರಿಗೆ ಮಂಡಳಿಯಿಂದ ದಿನಾಂಕ:25.12.2005 ರಂದು ಅನುಮೋದನೆ ನೀಡಲಾಗಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು 6 ತಿಂಗಳ ಕಾಲಾವಕಾಶ ನಿಗದಿಪಡಿಸಲಾಗಿತ್ತು.

ಆ ಈಗ ಈ ಯೋಜನೆ ಯಾವ ಹಂತದಲ್ಲಿದೆ; ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆಯೇ?

ಯೋಜನೆಯ ಉಳಿದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಅಕ್ಟೋಬರ್–2006ರಲ್ಲಿ ಚಾಲನೆಗೊಳಿಸಲಾಗಿದೆ. ಬ್ಯಾರೇಜ್ ಕಾಮಗಾರಿ ಶೇಕಡ 80 ರಷ್ಟು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿ ಪ್ರಗತಿಯಲ್ಲಿದೆ.

ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯು ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 68 ಯುಡಬ್ಲ್ಯೂಎಸ್ 2001 ದಿನಾಂಕ:29.11.2001 ರಲ್ಲಿ ನೀಡಲಾಗಿದೆ.

ಇ ಕಾಮಗಾರಿ ಪ್ರಾರಂಭಿಸಲಾಗಿದೆಯೇ? ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಯಿತು? ಇದಕ್ಕಾಗಿ ಇಲ್ಲಿಯವರೆವಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? ಕಾಮಗಾರಿ ವಿಳಂಬವಾಗಲು ಕಾರಣವೇನು?

ಕಾರಂಜಾ ನದಿಗೆ ಅಡ್ಡಲಾಗಿ ಆರ್.ಸಿ.ಸಿ ವೆಂಟೆಡ್ ಬ್ಯಾರೇಜ್ ನಿರ್ಮಿಸುವ ಕಾಮಗಾರಿಯನ್ನು ದಿನಾಂಕ:18.02.2006 ರಂದು ಪ್ರಾರಂಭಿಸಲಾಗಿದೆ. ಈ ಕಾಮಗಾರಿಗಾಗಿ ಇದುವರೆಗೆ ರೂ.81.14 ಲಕ್ಷಗಳನ್ನು ಪೆಚ್ಚ ಮಾಡಲಾಗಿದೆ.

ಕಾರಂಜಾ ನದಿಯಲ್ಲಿ ಆಗಿಂದಾಗ್ಗೆ ಉಂಟಾಗುತ್ತಿರುವ ಅನಿರೀಕ್ಷಿತ ಪ್ರವಾಹಗಳು ಹಾಗೂ ಕಾರಂಜಾ ಜಲಾಶಯದಿಂದ ನೀರು ಬಿಡುಗಡೆ ಮಾಡಿರುವುದರಿಂದ ಮತ್ತು ನದಿ ಪಾತ್ರದಲ್ಲಿ ಕಾಮಗಾರಿಯ ತಳಪಾಯದ ಕೆಲಸಗಳಲ್ಲಿ ಉಂಟಾದ ತಾಂತ್ರಿಕ ಅಡಚಣೆಗಳಿಂದ ಈ ಕಾಮಗಾರಿಯು ವಿಳಂಬವಾಗಿರುತ್ತದೆ.

ಈ ಈ ಕಾಮಗಾರಿ ಪೂರ್ಣಗೊಳ್ಳಲು ಎಷ್ಟು ಸಮಯದ ಅವಶ್ಯಕತೆ ಇದೆ? ಕಾಮಗಾರಿ ಪೂರ್ಣಗೊಂಡಾಗ ಪಟ್ಟಣದ ಎಷ್ಟು ಜನಸಂಖ್ಯೆಗೆ ಕುಡಿಯುವ ನೀರಿನ ಸೌಲಭ್ಯ ದೊರಯಲಿದೆ?

ಈ ಕಾಮಗಾರಿಯನ್ನು ಮಾರ್ಚ್‌2009ರ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಭಾಲ್ಕಿ ಪಟ್ಟಣದ 2031ನೇ ಸಾಲಿಗೆ ಅಂದಾಜಿಸಿದ 60,000 ಜನಸಂಖ್ಯೆಗೆ ತಲಾ ದಿನಂಪ್ರತಿ 113 ಲೀಟರ್ ನಂತೆ ನೀರು ಸರಬರಾಜು ಮಾಡಬಹುದಾಗಿದೆ.

220 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಕಳಪೆ ದರ್ಜೆಯ ಕಾಮಗಾರಿಗಳ ಬಗ್ಗೆ ಲೋಕಾಯಕ್ತರಿಂದ ತನಿಖೆಗೆ ಆದೇಶ ನೀಡಿರುವುದು ನಿಜವೇ, ಯಾವಾಗ ಈ ಆದೇಶವನ್ನು ನೀಡಲಾಯಿತು.

ಕಳಪೆ ದರ್ಜೆಯ ಕಾಮಗಾರಿಗಳ ಬಗ್ಗೆ ಲೋಕಾಯುಕ್ತರಿಂದ ತನಿಖೆಗೆ ಆದೇಶ ನೀಡಿರುವುದಿಲ್ಲ.

ಆ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳ ಕಾಮಗಾರಿಗಳ ಬಗ್ಗೆ ಈ ತನಿಖೆಗೆ ಆದೇಶ ನೀಡಲಾಗಿದೆ.

ಅನ್ವಯಿಸುವುದಿಲ್ಲ.

ಇ) ಈ ಕಾಮಗಾರಿಗಳ ವಿವರಗಳೇನು; ಇದಕ್ಕಾಗಿ ಸರ್ಕಾರವು ವೆಚ್ಚ ಮಾಡಿರುವ ಹಣವೆಷ್ಟು?

ಇಲ್ಲ.

ಈ) ಲೋಕಾಯುಕ್ತ ತನಿಖೆಯು ಈಗ ಯಾವ ಹಂತದಲ್ಲಿದೆ; ಈ ಕಳಪೆ ದರ್ಜೆಯ ಕಾಮಗಾರಿಗಳ ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಹಾಗೂ ಇತರೆ ವ್ಯಕ್ತಿಗಳ ವಿವರಗಳೇನು;

ಇಲ್ಲ.

ಉ) ಇದುವರೆವಿಗೂ ಎಷ್ಟು ಜನರನ್ನು ವಿಚಾರಣೆಗೆ ಗುರಿಪಡಿಸಲಾಗಿದೆ?

ಇಲ್ಲ.

221 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ
ಲೋಕೋಪಯೋಗಿ ಸಚಿವರು

ಅ) ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ಬಹುತೇಕ ರಸ್ತೆಗಳು ಅಪೂರ್ಣ ಕಾಮಗಾರಿಗಳಿಂದ ಕೂಡಿದ್ದು ಹಾಗೂ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;